ಆತ್ಯಂತಿಕ ಅರ್ಥವನ್ನು ಕಂಡುಕೊಂಡಂತಾಗುತ್ತದೆ, ಜೀವನ ಪರಿಪೂರ್ಣವಾಗುತ್ತದೆ.

ಜೀವನಕ್ಕೆ ಅರ್ಥವನ್ನು ಹುಡುಕುತ್ತ ಭಗವಂತನಡೆಗೆ ಹೋಗುವವನು **ಅರ್ಥಾರ್ಥಿ**. ಭಗವಂತನು ಪೂರ್ಣ ಸತ್ಯ; ಉಳಿದೆಲ್ಲವೂ ಅವನ ಅಂಶಗಳು. ಜೀವಿಗಳೆಲ್ಲ ಅವನ ಅಂಶಗಳು. ದೇಹದ ವಿವಿಧ ಅಂಗಗಳು ದೇಹದೊಡನೆ ಇದ್ದಾಗಲೇ ಅವುಗಳಿಗೆ ಅರ್ಥ, ಇಲ್ಲದಿದ್ದರೆ ಇಲ್ಲ. ಹಾಗೆಯೇ ನಾವು ಪೂರ್ಣದಿಂದ ಪ್ರತ್ಯೇಕವಾಗಿರುವುದರಿಂದಲೇ ಅತೃಪ್ತಿ. ಈ ಅತೃಪ್ತಿಯನ್ನು ನೀಗಿಸಲು ಏನೇನೋ ಮಾಡುತ್ತೇವೆ, ಯಾವುದರಿಂದಲೂ ಆತ್ಯಂತಿಕ ತೃಪ್ತಿ ದೊರೆಯುವುದಿಲ್ಲ. ಒಂದು ನೀರಿನ ಹನಿಯು ತನ್ನ ವೈಯಕ್ತಿಕತೆಯನ್ನು ಕಳೆದುಕೊಳ್ಳಲು ಇಷ್ಟಪಡಲಿಲ್ಲ – ತಾನು ಪ್ರತ್ಯೇಕವಾಗಿರಬೇಕೆಂದು ಬಯಸಿತು. ಹಾಗೆ ಅದು ಪ್ರತ್ಯೇಕವಾಗಿ ಉಳಿದರೆ ಕ್ರಮೇಣ ತನ್ನ ಅಸ್ತಿತ್ವವನ್ನೇ ಕಳೆದುಕೊಳ್ಳುತ್ತದೆ. ಸಮುದ್ರವು ಅದಕ್ಕೆ ಹೇಳುತ್ತದೆ, "ನೀನು ನನ್ನೊಡನೆ ಒಂದಾದರೆ, ನಿನ್ನ ವೈಯಕ್ತಿಕತೆಯನ್ನು ಕಳೆದುಕೊಳ್ಳುವುದರ ಬದಲು ನಿಜವಾದ ವೈಯಕ್ತಿಕತೆಯನ್ನು ಪಡೆಯುತ್ತೀಯೆ." ಹಾಗೆಯೇ ವ್ಯಕ್ತಿಗಳು ಭಗವಂತನಿಂದ ಪ್ರತ್ಯೇಕವಾಗಿ ಉಳಿದರೆ ವಿಷಯ ಮರುಭೂಮಿಯಲ್ಲಿ ತಮ್ಮ ಅಸ್ತಿತ್ವವನ್ನು ಕಳೆದುಕೊಳ್ಳುತ್ತಾರೆ.

**ಯೇ ಕೇ ಚಾತ್ಮಹನೋ ಜನಾಃ** (ತಮ್ಮನ್ನು ತಾವೇ ನಾಶ ಮಾಡಿಕೊಳ್ಳುವವರು) ಎಂದು ಈಶಾವಾಸ್ಯೋಪನಿಷತ್ ಅಂಥವರನ್ನು ಕರೆಯುತ್ತದೆ. ಶ್ರೀರಾಮಕೃಷ್ಣರು ಕೂಡ ಭಗವತ್ ಸಾಕ್ಷಾತ್ಕಾರವಿಲ್ಲದ ಜೀವನ ವ್ಯರ್ಥವೆಂದು ಭಾವಿಸಿ, ತಮ್ಮನ್ನು ತಾವೇ ಬಲಿಕೊಡಲು ಮುಂದಾದಾಗ ಅವರಿಗೆ ಸಾಕ್ಷಾತ್ಕಾರವಾಯಿತು. ಆಂತರಿಕ ಶೂನ್ಯತೆಯ ಭಾವವು ತೀವ್ರ ವ್ಯಾಕುಲತೆಯನ್ನು ಜಾಗೃತಗೊಳಿಸುತ್ತದೆ – ನೀರಡಿಕೆಯಾದವನು ನೀರನ್ನು ಬಯಸುವಂತೆ, ನೀರಿನಲ್ಲಿ ಮುಳುಗಿದವನು ಉಸಿರಿಗಾಗಿ ಚಡಪಡಿಸುವಂತೆ.

**ಜ್ಞಾನಿ:** ಭಗವತ್ಸಾಕ್ಷಾತ್ಕಾರವಾದ ಮೇಲೆ ವ್ಯಕ್ತಿಯು ಜ್ಞಾನಿಯಾಗುತ್ತಾನೆ. ಸಾಧಕನು ಮೊದಲು **ಆರ್ತ**ನಾಗಿ ವಿಷಯಾಸಕ್ತಿಯಿಂದ ಪಾರಾಗಲು ಭಗವಂತನನ್ನು ಮೊರೆಹೋಗುತ್ತಾನೆ. ಮುಂದೆ ಜಿಜ್ಞಾಸುವಾಗಿ ಭಗವಂತನನ್ನು ಅರಸುತ್ತಾನೆ. ಅನಂತರ ಅರ್ಥಾರ್ಥಿಯಾಗಿ ಭಗವತ್ಸಾನ್ನಿಧ್ಯವನ್ನು ಬಯಸುತ್ತಾನೆ. ಕೊನೆಯಲ್ಲಿ ಭಗವಂತನನ್ನು ಪಡೆದು ಶ್ರೇಷ್ಠ ಜ್ಞಾನಿಯಾಗುತ್ತಾನೆ. ಈ ನಾಲ್ಕು ಬಗೆಯ ಭಕ್ತರಲ್ಲಿ ಜ್ಞಾನಿಯು ವಿಶಿಷ್ಟನಾದವನು ಎಂದು ಶ್ರೀಕೃಷ್ಣನು ಹೇಳುತ್ತಾನೆ :

**ತೇಷಾಂ ಜ್ಞಾನೀ ನಿತ್ಯಯುಕ್ತ ಏಕಭಕ್ತಿರ್ವಿಶಿಷ್ಯತೇ ।**
**ಪ್ರಿಯೋ ಹಿ ಜ್ಞಾನಿನೋऽತ್ಯರ್ಥಮಹಂ ಸ ಚ ಮಮ ಪ್ರಿಯಃ ॥**

*ಭಗವದ್ಗೀತೆ, (೭ : ೧೭)*

"ಅವರಲ್ಲಿ ಭಗವನ್ನಿಷ್ಠನೂ ಭಗವಂತನಲ್ಲಿ ಮಾತ್ರ ಭಕ್ತಿಯುಳ್ಳವನೂ ಆದ ಜ್ಞಾನಿಯು ಶ್ರೇಷ್ಠನು. ನಾನು ಜ್ಞಾನಿಗೆ ಅತ್ಯಂತ ಪ್ರಿಯನು, ಮತ್ತು ಅವನು ನನಗೆ ಪ್ರಿಯನಾಗಿರುವನು."

**ಆತ್ಮನಸ್ತು ಕಾಮಾಯ ಸರ್ವಂ ಪ್ರಿಯಂ ಭವತಿ** – ಎಲ್ಲರಿಗೂ ಪ್ರಿಯವಾದದು ಆತ್ಮ. ಆತ್ಮನಿಗಾಗಿಯೇ ಉಳಿದೆಲ್ಲವೂ ಪ್ರಿಯವಾಗುತ್ತವೆ ಎಂದು ಬೃಹದಾರಣ್ಯಕ ಉಪನಿಷತ್ತು ಹೇಳುತ್ತದೆ. ಭಗವಂತನು ಜ್ಞಾನಿಯ ಆತ್ಮವೇ ಆಗಿರುವುದರಿಂದ ಅವನು ಅತ್ಯಂತ ಪ್ರಿಯನಾಗುತ್ತಾನೆ. ನಾವೆಲ್ಲರೂ ಪ್ರಜ್ಞಾವಸ್ತುವನ್ನೇ ಪ್ರೀತಿಸುವುದು, ಯಾರೂ ಜಡವಸ್ತುವನ್ನು ಪ್ರೀತಿಸುವುದಿಲ್ಲ. ಎಲ್ಲಿ ಪ್ರಜ್ಞೆಯ ಅಭಿವ್ಯಕ್ತಿ ಅಧಿಕವಾಗಿದೆಯೋ ಅದನ್ನು ನಾವು ಹೆಚ್ಚು ಪ್ರೀತಿಸುತ್ತೇವೆ. ಭಗವಂತನು ಪ್ರಜ್ಞಾಸ್ವರೂಪವೇ ಆಗಿರುವುದರಿಂದ ಅವನನ್ನು ಪ್ರೀತಿಸುವಷ್ಟು ಬೇರಾವುದನ್ನೂ ಪ್ರೀತಿಸಲಾಗುವುದಿಲ್ಲ. ಈ ಪ್ರೀತಿಯ ಆಧಿಕ್ಯವನ್ನು ಸಂತಶ್ರೇಷ್ಠರ ಜೀವನದಲ್ಲಿ ನಾವು ಕಾಣುತ್ತೇವೆ.

ಶ್ರೀಕೃಷ್ಣನು ಒಂಭತ್ತನೆಯ ಅಧ್ಯಾಯದಲ್ಲಿ ಹೀಗೆ ಹೇಳುತ್ತಾನೆ:

**ಸಮೋऽಹಂ ಸರ್ವಭೂತೇಷು ನ ಮೇ ದ್ವೇಷ್ಯೋऽಸ್ತಿ ನ ಪ್ರಿಯಃ ।**
**ಯೇ ಭಜಂತಿ ತು ಮಾಂ ಭಕ್ತ್ಯಾ ಮಯಿ ತೇ ತೇಷು ಚಾಪ್ಯಹಮ್॥**

*ಭಗವದ್ಗೀತೆ, (೯ : ೨೯)*

"ನಾನು ಸಮಸ್ತಭೂತಗಳಲ್ಲೂ ಸಮನಾಗಿರುತ್ತೇನೆ. ನನಗೆ ಶತ್ರುವೂ ಇಲ್ಲ, ಮಿತ್ರನೂ ಇಲ್ಲ. ಆದರೆ ಭಕ್ತಿಪೂರ್ವಕವಾಗಿ ಯಾರು ನನ್ನನ್ನು ಭಜಿಸುತ್ತಾರೆಯೋ ಅವರು ನನ್ನಲ್ಲಿ ಇರುವರು ಮತ್ತು ನಾನು ಕೂಡ ಅವರಲ್ಲಿ ಇರುವೆನು."

ಜ್ಞಾನಿಯಲ್ಲಿ ಭಕ್ತಿಯ ಆಧಿಕ್ಯದಿಂದಾಗಿ ಭಗವಂತನ ಆವಿರ್ಭಾವ ಅಧಿಕವಾಗುತ್ತದೆ. ನದಿಯು ಎಲ್ಲರಿಗೂ ಸಮಾನವಾಗಿ ಹರಿಯುತ್ತದೆ, ಆದರೆ ದೊಡ್ಡ ಪಾತ್ರೆಯನ್ನು ತಂದವರು ಹೆಚ್ಚು ನೀರನ್ನು ಪಡೆಯಬಹುದು. ಜ್ಞಾನಿಯು ಅಂತಹ ದೊಡ್ಡ ಪಾತ್ರೆ ಇದ್ದ ಹಾಗೆ. ಒಂದು ಸರೋವರಕ್ಕೆ ಅನೇಕ ಕಾಲುವೆಗಳಿದ್ದರೆ ಯಾವುದರಲ್ಲಿ ಅಡೆತಡೆಗಳಿಲ್ಲವೊ, ಅದರಲ್ಲಿ ಹೆಚ್ಚು ನೀರು ಹರಿಯುತ್ತದೆ. ಜ್ಞಾನಿಯು ಅಂತಹ ಅಡೆತಡೆಗಳಿಲ್ಲದ ಕಾಲುವೆಯ ಹಾಗೆ.

ಶ್ರೀಕೃಷ್ಣನು ಭಗವದ್ಗೀತೆಯಲ್ಲಿ ಉಲ್ಲೇಖಿಸುವ ವಿವಿಧ ಬಗೆಯ ಭಕ್ತರನ್ನು, ಯೇಸುಕ್ರಿಸ್ತನ ಕೆಳಗಿನ ಹೇಳಿಕೆಯೊಂದಿಗೆ ಹೋಲಿಸಬಹುದು : "Ask, and it shall be given to you; seek and ye shall find; knock, and it shall be opened unto you." ('ಕೇಳು, ನಿನಗೆ ಕೊಡಲ್ಪಡುತ್ತದೆ; ಹುಡುಕು, ನಿನಗೆ ಸಿಗುತ್ತದೆ; ತಟ್ಟು, ನಿನಗೆ ತೆರೆಯಲ್ಪಡುತ್ತದೆ.') ಇಲ್ಲಿ ಕೇಳುವುದು ಆರ್ತನಿಗೆ ಅನ್ವಯಿಸುತ್ತದೆ; ಹುಡುಕುವುದು ಜಿಜ್ಞಾಸುವಿಗೆ ಅನ್ವಯಿಸುತ್ತದೆ ಮತ್ತು ಬಾಗಿಲು ತಟ್ಟುವುದು ಅರ್ಥಾರ್ಥಿಗೆ ಅನ್ವಯಿಸುತ್ತದೆ. ಬಾಗಿಲು ತೆರೆಯಿತೆಂದರೆ ಅವನು ಜ್ಞಾನಿಯಾಗುತ್ತಾನೆ. ಭಗವದ್ಭಾವದಿಂದ ಸಂಪೂರ್ಣ ತುಂಬಿಹೋದವನೇ ಜ್ಞಾನಿ. ಇಲ್ಲಿ ಜ್ಞಾನಿ ಮತ್ತು ಭಕ್ತರಲ್ಲಿ ವ್ಯತ್ಯಾಸವಿಲ್ಲವೆಂಬುದನ್ನು ಶ್ರೀಕೃಷ್ಣನು ಸೂಚಿಸುತ್ತಿದ್ದಾನೆ.

ಶ್ರೀರಾಮಕೃಷ್ಣರ ಈ ಕೆಳಗಿನ ಹೇಳಿಕೆ ಇಲ್ಲಿ ತುಂಬ ಔಚಿತ್ಯಪೂರ್ಣವಾಗಿ ಕಂಡುಬರುತ್ತದೆ: "ನನ್ನ ಅನುಭವದ ಪ್ರಕಾರ ಹೇಳಬೇಕಾದರೆ, ಮನುಷ್ಯನು ವಿಚಾರದ ಮೂಲಕ ಭಗವಂತನ ಬಗ್ಗೆ ಒಂದು ಬಗೆಯ ಜ್ಞಾನವನ್ನು ಪಡೆಯುತ್ತಾನೆ; ಧ್ಯಾನದ ಮೂಲಕ ಇನ್ನೊಂದು ಬಗೆಯ ಜ್ಞಾನವನ್ನು ಪಡೆಯುತ್ತಾನೆ; ಆದರೆ ಭಗವಂತನೇ ಅವನಿಗೆ, ಅಂದರೆ ಭಕ್ತನಿಗೆ, ಪ್ರತ್ಯಕ್ಷನಾದಾಗ ಭಗವಂತನ ಬಗ್ಗೆ ಮೂರನೇ ಬಗೆಯ ಜ್ಞಾನವುಂಟಾಗುತ್ತದೆ."

## ಸ್ವಾಮಿ ವಿವೇಕಾನಂದರ ದೃಷ್ಟಿಯಲ್ಲಿ

# ಭಾರತದ ಆದರ್ಶಮಹಿಳೆ ಮತ್ತು ಸ್ತ್ರೀ-ಶಿಕ್ಷಣ

ಸ್ವಾಮಿ ನವದುರ್ಗಾನಂದ



ಮಹಿಳೆಯರ ಸ್ವಾತಂತ್ರ್ಯ ಮತ್ತು ಸಮಾನತೆಗಾಗಿ ಯಾವುದೇ ಮುಚ್ಚುಮರೆಯಿಲ್ಲದೆ ಹೋರಾಡಿದ ಪ್ರಥಮ ಸಂನ್ಯಾಸಿ ಎಂದರೆ ಸ್ವಾಮಿ ವಿವೇಕಾನಂದರು. ಎಲ್ಲ ಜನಾಂಗಗಳೂ ಸ್ತ್ರೀಯರಿಗೆ ಯಥಾರ್ಥ ಗೌರವವನ್ನು ನೀಡುವುದರ ಮೂಲಕ ಹೆಸರುವಾಸಿ ಯಾದವು. ಯಾವ ದೇಶ ಅಥವಾ ಜನಾಂಗ ಸ್ತ್ರೀಯರಿಗೆ ಗೌರವ ಕೊಟ್ಟಿಲ್ಲವೋ ಅದು ಖಂಡಿತವಾಗಿ ಕೀರ್ತಿ ಪಡೆದಿಲ್ಲ; ಮುಂದೆ ಪಡೆಯುವುದೂ ಇಲ್ಲವೆಂದು ಸ್ವಾಮೀಜಿ ಮುಕ್ತ ಕಂಠದಿಂದ ಸಾರಿದರು. ಅವರು ತಮಗಿಂತ ಮೊದಲಿನ ಸುಧಾರಕರ ಪ್ರಯತ್ನಗಳನ್ನು ಮುಂದು ವರಿಸಿದರಲ್ಲದೆ ಮಹಿಳೆಯರ ಶಿಕ್ಷಣದ ಸರ್ವಾಂಗೀಣ ಪ್ರಗತಿ, ಮನೆ ಹಾಗೂ ಸಮಾಜಗಳಲ್ಲಿ ಅವರ ಅಭಿವ್ಯಕ್ತಿಯ ಸ್ವಾತಂತ್ರ್ಯ ಇವುಗಳ ಪ್ರಬಲ ಪ್ರತಿಪಾದಕರಾದರು. ನಮ್ಮ ಮಹಿಳೆಯರಲ್ಲಿ ಆತ್ಮವಿಶ್ವಾಸ, ನಿರ್ಭೀತಿ ಮತ್ತು ಆಂತರಿಕ ಶಕ್ತಿಯ ಜಾಗೃತಿ ಇವು ನೆಲೆಗೊಳ್ಳುವಂತೆ ಮಾಡಿದರು. ಆಧುನಿಕ ಮಹಿಳೆಯ ಎದುರು ಮಾತೃತ್ವದ ಭಾರತೀಯ ಆದರ್ಶವನ್ನು ಎತ್ತಿಹಿಡಿದರು.

ಭಾರತೀಯ ಸಂಸ್ಕೃತಿಯನ್ವಯ ಮಹಿಳೆಯ ಪರಮೋಚ್ಚ ಸ್ಥಾನವೆಂದರೆ ಮಾತೃತ್ವದ ಆದರ್ಶ. ದೇವರನ್ನು ತಾಯಿಯೆಂದು ಕಾಣುವ ನಮ್ಮ ರಾಷ್ಟ್ರ ಮಹಿಳೆಯಲ್ಲಿ ಸಕಲ ಗೌರವ ಮತ್ತು ಮಾಧುರ್ಯಗಳನ್ನು ಬೆಳೆಸಿಕೊಂಡಿದೆ. ಸ್ತ್ರೀಜನಾಂಗವೂ ಜಗನ್ಮಾತೆಯ ರೂಪವೆಂದು ಹಿಂದೂ ಸಂಸ್ಕೃತಿ ಹೇಳುತ್ತದೆ. ತಾಯಿಯು ತಂದೆ ಅಥವಾ ಗುರುವಿಗಿಂತ ಅಧಿಕ ಗೌರವಕ್ಕೆ ಅರ್ಹಳೆಂದು ಮನುಸ್ಮೃತಿ ಸಾರುತ್ತದೆ:

**ಉಪಾಧ್ಯಾಯಾನ್ ದಶಾಚಾರ್ಯಃ ಆಚಾರ್ಯಾಣಾಂ ಶತಂಪಿತಾ ।**
**ಸಹಸ್ರಂ ತು ಪಿತೄನ್ ಮಾತಾ ಗೌರವೇಣಾತಿರಿಚ್ಯತೇ ॥**

'ಶಿಕ್ಷಕನಿಗಿಂತ ಹತ್ತುಪಟ್ಟು ಗುರುವೂ, ಗುರುವಿಗಿಂತ ನೂರುಪಟ್ಟು ತಂದೆಯೂ, ತಂದೆಗಿಂತ ಸಾವಿರಪಟ್ಟು ತಾಯಿಯೂ ಗೌರವಕ್ಕೆ ಪಾತ್ರಳಾಗಿರುತ್ತಾಳೆ.' ಮಾತೃತ್ವದಲ್ಲಿ ಅಡಗಿರುವ ತನ್ನತನವನ್ನು ಮರೆಯುವ ಪ್ರೇಮ ಹಾಗೂ ಸಹಾನುಭೂತಿಗಳೇ ಮಾತೆಗೆ ಮಹಾಗೌರವವನ್ನು ನೀಡಿವೆ. ಪಾತಿವ್ರತ್ಯ ಮತ್ತು ಪರಿಶುದ್ಧತೆ, ನಿಸ್ವಾರ್ಥತೆ ಮತ್ತು ಸೇವೆ, ಸರಳತೆ ಮತ್ತು ಸೌಜನ್ಯ ಈ ಆದರ್ಶಗಳನ್ನು ದೈವಿಕತೆಯ ದೃಷ್ಟಿಯಿಂದ ನಮ್ಮ ಮಹಿಳೆಯರು ಪಾಲಿಸಿಕೊಂಡು ಬಂದಿದ್ದಾರೆ. ಇವು ಅವಳ ಜೀವನದಲ್ಲಿ ಹಾಸುಹೊಕ್ಕಾಗಿವೆ. ಭಾರತೀಯ ಮಹಿಳೆ ತನ್ನ ಈ ಪರಂಪರೆಯಿಂದ ತಪ್ಪಿಸಿಕೊಳ್ಳಲಾಗುವುದಿಲ್ಲ.

ಸ್ವಾಮಿ ವಿವೇಕಾನಂದರು ತಮ್ಮ ಸ್ವದೇಶ ಮಂತ್ರದಲ್ಲಿ 'ನಮ್ಮ ಸ್ತ್ರೀಯರ ಆದರ್ಶ – ಸೀತಾ, ಸಾವಿತ್ರಿ, ದಮಯಂತಿಯರು ಎಂಬುದನ್ನು ಮರೆಯದಿರಿ' ಎಂದು ಸಾರಿದ್ದಾರೆ. ಅವರ ಅಭಿಮತವೇನೆಂದರೆ, ಭರತಖಂಡದಲ್ಲಿ ಆದರ್ಶ ಮಹಿಳೆ ತಾಯಿ, ಮೊದಲೂ ತಾಯಿಯೇ, ಅನಂತರವೂ ತಾಯಿಯೇ; ಹಿಂದೂ ಮನಸ್ಸಿನಲ್ಲಿ ಮಹಿಳೆ ಎಂಬ ಶಬ್ದ ತಾಯ್ತನವನ್ನು ನೆನಪಿಗೆ ತರುವುದು; ಆದ್ದರಿಂದಲೇ ದೇವರನ್ನು ತಾಯಿ ಎಂದು ಕರೆಯುವರು.

ಭಾರತೀಯ ಸಂಸ್ಕೃತಿಯ ಪ್ರಕಾರ ಸ್ತ್ರೀತ್ವವು ತಲುಪಬಹುದಾದ ಅತ್ಯುನ್ನತ ಶಿಖರವೆಂದರೆ ಈ ಮಾತೃತ್ವ. ಈ ನಿಸ್ವಾರ್ಥ ಪ್ರೀತಿ-ಸೇವೆಗಳ ಸಂಕೇತವಾದ ಮಾತೆಯ ಮೂಲಕ ಹಿಂದೂ ವ್ಯಕ್ತಿಯು ಆಂತರ್ಯದ ದಿವ್ಯತೆಯನ್ನು ಕಂಡುಕೊಂಡಿದ್ದಾನೆ. ಇದು ಕಣ್ಣಿಗೆ ಕಾಣುವ ತಾಯಿಯ ಸೀಮಿತ ವ್ಯಕ್ತಿತ್ವವನ್ನು ಮೀರಿರುವಂಥದು. ಹಿಂದೂ ಜನಾಂಗವು ಭಗವಂತನನ್ನು ಕಂಡದ್ದು ಕೂಡ ಎಲ್ಲ ಸೃಷ್ಟಿಯ ಮಾತೆಯಾಗಿ. ಹೀಗೆ ಭಗವಂತನನ್ನು ತಾಯಿಯಾಗಿ ಕಾಣಲು ಕಲಿತ ಜನತೆ ಹಾಗೂ ತತ್ತ್ವ, ಮಹಿಳೆಯನ್ನು ಅತ್ಯಂತ ಮಾರ್ದವತೆ ಗೌರವಗಳಿಂದ ಕಾಣುವುದನ್ನೂ ಕಲಿತಿದೆ. ಈ ಉನ್ನತ ಹಿಂದೂ ಸಂಸ್ಕೃತಿ ಎಲ್ಲ ಸ್ತ್ರೀಯರನ್ನೂ, ಅಷ್ಟೇಕೆ

**ಭಾರತೀಯ ಮಹಿಳೆಯರ ಅಭಿವೃದ್ಧಿಗಾಗಿ ದೂರದೃಷ್ಟಿಯ ಚಿಂತನೆ ಹಾಗೂ ಕಾರ್ಯನೀತಿಯನ್ನು ಹೊಂದಿದ್ದ ಸ್ವಾಮಿ ವಿವೇಕಾನಂದರ ವಿಚಾರಗಳನ್ನು ಕುರಿತು ವಿಶ್ಲೇಷಣೆ ನಡೆಸಿರುವ ಲೇಖಕರು ಪ್ರಸ್ತುತ ಬೆಳಗಾವಿಯ ರಾಮಕೃಷ್ಣ ಮಿಷನ್ ಆಶ್ರಮದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.**

ಎಲ್ಲ ಪಶುಪಕ್ಷಿಗಳಲ್ಲಿನ ಸ್ತ್ರೀಜಾತಿಯನ್ನೂ ಜಗನ್ಮಾತೆಯ ರೂಪಗಳಾಗಿ ನೋಡುವುದನ್ನು ಕಲಿಸಿಕೊಟ್ಟಿದೆ.

ಪುರುಷನಂತೆ ಸ್ತ್ರೀಯೂ ಭವಿಷ್ಯವುಳ್ಳ ವ್ಯಕ್ತಿಯೆಂದು ನಮ್ಮ ಭಾರತೀಯ ಶಾಸ್ತ್ರಗಳು ಸಾರುತ್ತವೆ. ಈ ಭವಿಷ್ಯದ ಶೋಧನೆಯೇ ಸ್ತ್ರೀಯನ್ನು ಅಭ್ಯುದಯ ಮತ್ತು ನಿಃಶ್ರೇಯಸಗಳ ಅಂದರೆ ಲೌಕಿಕ ಉನ್ನತಿ ಮತ್ತು ಆಧ್ಯಾತ್ಮಿಕ ಸಾಧನೆಗಳ ಸಾಧಕರನ್ನಾಗಿ ರೂಪುಗೊಳಿಸಿದೆ. ಜೀವನದ ಪರಮಗುರಿಯಾದ ನಿಃಶ್ರೇಯಸದ ಸಾಧನೆಯಲ್ಲಿ ಪುರುಷ–ಸ್ತ್ರೀ ಇಬ್ಬರೂ ಏಕಾಂಗಿಯಾಗಿಯೇ ಮುಂದುವರಿಯಬೇಕಾಗುತ್ತದೆ. ಲೌಕಿಕತೆಯನ್ನು ಮೀರಿದ ಸ್ತ್ರೀ–ಪುರುಷರು ಮಾತ್ರ ಸಮಾಜದ ಜವಾಬ್ದಾರಿಯುತ ಹೊಣೆಗಾರಿಕೆಯನ್ನು ಹೊರಬಲ್ಲರು. ಅವರೇ ನಿಜವಾಗಿ ಮುಕ್ತರು. ನಮ್ಮ ಚರಿತ್ರೆಯಾದ್ಯಂತ ಸ್ತ್ರೀಯರು ನಮ್ಮ ಆಧ್ಯಾತ್ಮಿಕ ಕ್ಷಿತಿಜವನ್ನು ದೇದೀಪ್ಯಮಾನಗೊಳಿಸಿದ್ದಾರೆ. ಶ್ರೀಶಂಕರಾಚಾರ್ಯರ ಕಾಲದಲ್ಲಿ ಅವರಿಗೂ ಮತ್ತು ಮಂಡನಮಿಶ್ರನಿಗೂ ನಡೆದ ಅದ್ವೈತದ ಚರ್ಚೆಯಲ್ಲಿ ತೀರ್ಪುಗಾರಳಾಗಿ ಮಂಡನಮಿಶ್ರನ ಸತಿ ಉಭಯಭಾರತಿ, ಅಂತೆಯೇ ಗಾರ್ಗಿ ಮತ್ತು ಮೈತ್ರೇಯಿಯರು ಉಪನಿಷತ್ ಕಾಲದ ಬ್ರಹ್ಮವಾದಿನಿಯರಿಗೆ ಕಲಶಪ್ರಾಯರಾಗಿದ್ದರು. ಬೌದ್ಧ ಕಾಲದ ಥೇರಿ ಸಂನ್ಯಾಸಿನಿಯರು ಮತ್ತು ಜೈನಧರ್ಮದ ಸಂನ್ಯಾಸಿನಿಯರು, ಶ್ರೀರಾಮಕೃಷ್ಣರ ಗುರುಗಳಲ್ಲೊಬ್ಬರಾದ ಭೈರವಿ ಬ್ರಾಹ್ಮಣಿ, ೧೨ನೇಯ ಶತಮಾನದ ಕರ್ಮಯೋಗಿ ಹಾಗೂ ಸಮಾಜಸುಧಾರಕ ಭಕ್ತಿಭಂಡಾರಿ ಬಸವಣ್ಣನವರ ಕಾಲದಲ್ಲಿ ವಿರಕ್ತಿಯ ಮೇರುಶಿಖರವಾಗಿ ನಿಂತ ಅಕ್ಕ ಮಹಾದೇವಿ – ಇವರೆಲ್ಲರೂ ಆಧ್ಯಾತ್ಮಿಕ ಉನ್ನತಿಯನ್ನು ಸಾಧಿಸಲು ಸ್ತ್ರೀಗೆ ಇರುವ ಸ್ವಾತಂತ್ರ್ಯಕ್ಕೆ ಸಾಕ್ಷಿಯಾಗಿದ್ದಾರೆ.

ಸ್ತ್ರೀ ಎಂದರೆ ನಾಗರಿಕ ಹಾಗೂ ಧಾರ್ಮಿಕ ಕ್ಷೇತ್ರಗಳಲ್ಲಿ ಪುರುಷನೊಡನೆ ಸಮಾನ ಸ್ಥಾನಮಾನ ಪಡೆದವಳೆಂಬುದನ್ನು ನಮ್ಮ ಚರಿತ್ರೆಯಲ್ಲಿ ಕಾಣುತ್ತೇವೆ. ಜ್ಞಾನಸಂಪಾದನೆಯೇ ಇರಲಿ, ಧಾರ್ಮಿಕ ವಿಧಿಗಳ ಆಚರಣೆಯೇ ಆಗಿರಲಿ, ಯುದ್ಧರಂಗವೇ ಆಗಿರಲಿ, ರಾಜಕೀಯವೇ ಆಗಿರಲಿ ಎಲ್ಲ ಕ್ಷೇತ್ರಗಳಲ್ಲಿ ಸ್ತ್ರೀಯು ಪುರುಷನ ಸಹಚರಿಯಾಗಿರುವುದನ್ನು ನಾವು ಕಾಣುತ್ತೇವೆ. ಸ್ತ್ರೀಪುರುಷರೆಂದರೆ ಒಂದೇ ಭಗವಂತನ ಎರಡು ಅರ್ಧಾಂಶಗಳೆಂದೂ, ಪರಸ್ಪರ ಪೂರಕ ವೆಂದೂ, ಒಬ್ಬರಲ್ಲದೆ ಇನ್ನೊಬ್ಬರು ಅಪೂರ್ಣರೆಂದೂ ಉಪನಿಷತ್ತುಗಳು ಪ್ರತಿಪಾದಿಸಿದವು. ನಿತ್ಯಶುದ್ಧ, ಪರಿಪೂರ್ಣ ಮತ್ತು ಸ್ವತಂತ್ರನಾಗಿರುವ ಲಿಂಗರಹಿತ ಆತ್ಮನೇ ಸ್ತ್ರೀ ಪುರುಷರ ನಿಜ ಸ್ವರೂಪವೆಂಬುದನ್ನು ಉಪನಿಷತ್ತುಗಳು ಸಾರಿರುವವು. ನಮ್ಮ ಸುದೀರ್ಘ ಚರಿತ್ರೆಯಲ್ಲಿ ಪುರಾತನ ವೇದಗಳ ಕಾಲದಲ್ಲಿ, ನಮ್ಮ ಸ್ತ್ರೀಯರು ಹೆಚ್ಚಿನ ಸ್ವಾತಂತ್ರ್ಯ ಮತ್ತು ಗೌರವಗಳನ್ನು ಅನುಭವಿಸುತ್ತಿದ್ದರು. ಬಾಲಕರಂತೆ ಬಾಲಕಿಯರೂ ಉಪನಯನ ಸಮಾರಂಭದಲ್ಲಿ ಯಜ್ಞೋಪವೀತವನ್ನು ಧರಿಸುತ್ತಿದ್ದರು ಮತ್ತು ಪವಿತ್ರ ಗಾಯತ್ರೀ ಮಂತ್ರವನ್ನು ಪಠಿಸುತ್ತಿದ್ದರು. ಈ ಸೌಲಭ್ಯಗಳು ನಮ್ಮ ಬಾಲಕಿಯರನ್ನು ಬಾಲಕರಂತೆಯೇ ವ್ಯಕ್ತಿತ್ವ ವಿಕಾಸದಲ್ಲಿ ಸಮವಾಗಿ ನಡೆಸಿಕೊಂಡು ಬಂದವು. ಕಾಲಕ್ರಮದಲ್ಲಿ ಅಂದರೆ ದೇಶ ಅವನತಿಯನ್ನು ಹೊಂದಿದಾಗ, ಪುರೋಹಿತ ವರ್ಗದವರು ಇತರ ಜಾತಿಯವರು ವೇದಗಳನ್ನು ಓದಲು ಅನರ್ಹರೆಂದು ತೀರ್ಮಾನಿಸಿದಾಗ, ಮಹಿಳೆಯರ ಹಕ್ಕುಬಾಧ್ಯತೆಯನ್ನು ಕಿತ್ತುಕೊಳ್ಳಲಾಯಿತು ಮತ್ತು ಅನ್ಯ ಸಂಸ್ಕೃತಿಯ ಆಳ್ವಿಕೆಯಿಂದ ಸ್ತ್ರೀಯರ ಸ್ಥಾನ ನಿಧಾನವಾಗಿ ಅವನತಿ ಹೊಂದಿತು.

ಸ್ವಾಮಿ ವಿವೇಕಾನಂದರು ಸ್ತ್ರೀಶಿಕ್ಷಣದ ಕುರಿತಾಗಿ ಧರ್ಮ, ಕಲೆ, ವಿಜ್ಞಾನ, ಗೃಹಕೃತ್ಯ, ಅಡುಗೆ, ಹೊಲಿಗೆ, ಶುಚಿತ್ವ– ಈ ವಿಷಯಗಳನ್ನು ಸುಮಾರಾಗಿ ಮಹಿಳೆಯರಿಗೆ ಹೇಳಿಕೊಡುವುದು ಉಚಿತವೆಂದೂ, ಆದರೆ ಕಥೆ, ಕಾದಂಬರಿಗಳನ್ನು ಅವರ ಕೈಗೆ ಕೊಡುವುದು ಬೇಡವೆಂದೂ ಹೇಳುತ್ತಿದ್ದರು. ಆದರ್ಶ ನಾರಿಯರ ಚರಿತ್ರೆಗಳನ್ನು ವಿದ್ಯಾರ್ಥಿನಿಯರ ಮುಂದೆ ಸರ್ವದಾ ಇಟ್ಟು, ಉಚ್ಚ ತ್ಯಾಗರೂಪವಾದ ವ್ರತದಲ್ಲಿ ಅವರಿಗೆ ಅನುರಾಗ ಹುಟ್ಟುವಂತೆ ಮಾಡಬೇಕು. ಸೀತೆ, ಸಾವಿತ್ರಿ, ದಮಯಂತಿ, ಲೀಲಾವತಿ, ಖನಾ, ಮೀರಾ – ಇವರ ಜೀವನಚರಿತ್ರೆಗಳನ್ನು ಮಹಿಳೆಯರಿಗೆ ತಿಳಿಯಪಡಿಸಿ ತಮ್ಮ ಜೀವನವನ್ನೂ ಹೀಗೆ ರೂಪಿಸಿಕೊಳ್ಳಬೇಕೆಂದು ಹೇಳಬೇಕು.ಇತರ ವಿಷಯಗಳ ಜೊತೆಗೆ ಅವರು ಪರಾಕ್ರಮ ಮತ್ತು ಶೌರ್ಯವನ್ನು ಕಲಿಯಬೇಕು. ಈ ವರ್ತಮಾನ ಕಾಲದಲ್ಲಿ ಅವರು ಆತ್ಮರಕ್ಷಣೆಯ ಪಾಠವನ್ನೂ ಕಲಿಯುವುದು ಅತ್ಯಾವಶ್ಯಕವಾಗಿದೆ. ಝಾನ್ಸಿರಾಣಿಯು ಒಂದು ಹೊಸ ಆದರ್ಶ. ಜನಸಾಮಾನ್ಯರಲ್ಲಿಯೂ ಹೆಂಗಸರಲ್ಲಿಯೂ ಶಿಕ್ಷಣ ಪ್ರಚಾರವಾಗದಿದ್ದರೆ ಏನೂ ಸಾಧ್ಯವಿಲ್ಲವೆಂದು ತಿಳಿದ ಅವರು ಕೆಲವು ಜನ ಸುಶಿಕ್ಷಿತರೂ ಸಚ್ಚರಿತ್ರೆಯುಳ್ಳವರೂ ಆದ ಬ್ರಹ್ಮಚಾರಿಣಿಯರನ್ನು ತಯಾರುಮಾಡಿ ಅವರು ಹಳ್ಳಿಗಳಿಗೆ ಹೋಗಿ ಪುರಾಣ, ಇತಿಹಾಸ, ಗೃಹಕಾರ್ಯ, ಕಲೆ, ಗೃಹಿಣಿಯ ಕರ್ತವ್ಯಗಳು, ಆದರ್ಶ ಜೀವನವನ್ನು ಬೆಳೆಸುವುದಕ್ಕೆ ಸಹಕಾರಿಯಾದ ನೀತಿಗಳು – ಇವುಗಳ ವಿಚಾರವಾಗಿ ಈಗಿನ ವಿಜ್ಞಾನದ ಸಹಾಯದಿಂದ ಮಹಿಳೆಯರಿಗೆ ಶಿಕ್ಷಣ ಕೊಡಬೇಕು ಎಂದು ಹೇಳುತ್ತಿದ್ದರು. ಮಹಿಳೆಯರನ್ನು ಧರ್ಮಪರಾಯಣರನ್ನಾಗಿಯೂ, ನೀತಿಪರಾಯಣರನ್ನಾಗಿಯೂ ಮಾಡಿದರೆ ಅವರ ಸಂತತಿ ಆಮೇಲೆ ಈ ವಿಷಯಗಳಲ್ಲಿ ಮತ್ತಷ್ಟು ಉನ್ನತಿಯನ್ನು ಸಾಧಿಸುವುದು. ಯಾವ ತಾಯಿಯು ಸುಶಿಕ್ಷಿತಳೂ ನೀತಿಪರಾಯಣಳಾಗಿಯೂ ಆಗಿರುತ್ತಾಳೋ ಅವರ ಮನೆಯಲ್ಲಿಯೇ ಶ್ರೇಷ್ಠ ವ್ಯಕ್ತಿಗಳು ಹುಟ್ಟುವರು ಎಂಬುದನ್ನು ಮನಗಂಡ ಸ್ವಾಮೀಜಿ ಮೊದಲು ಹೆಂಗಸರನ್ನು ಉತ್ತಮ ಸ್ಥಿತಿಗೆ ತರುವುದರ ಜೊತೆಗೆ ಸಾಮಾನ್ಯ ಜನರನ್ನು ಎಚ್ಚರಗೊಳಿಸಬೇಕು; ಹಾಗಾದರೆ ಮಾತ್ರ ದೇಶದ ಕಲ್ಯಾಣ, ಭರತಖಂಡದ ಉದ್ಧಾರ ಸಾಧ್ಯವೆಂದು ತಮ್ಮ ಅನೇಕ ಉಪನ್ಯಾಸಗಳ ಮೂಲಕ ದೇಶದಲ್ಲೆಲ್ಲಾ ಸಾರಿದರು.

ಸ್ತ್ರೀ–ಶಿಕ್ಷಣದ ಕುರಿತಾದ ಶಿಷ್ಯನ ಪ್ರಶ್ನೆಗೆ ಸ್ವಾಮೀಜಿ ಉತ್ತರಿಸುತ್ತ : "ಮನು ಹೇಳಿರುವನು, 'ಗಂಡುಮಕ್ಕಳಂತೆಯೇ ಹೆಣ್ಣು ಮಕ್ಕಳನ್ನು ಸಂರಕ್ಷಿಸಿ ವಿದ್ಯಾವಂತೆಯರನ್ನಾಗಿ ಮಾಡಬೇಕು.' ಮೂವತ್ತು ವರುಷದವರೆಗೂ ಬ್ರಹ್ಮಚರ್ಯ ವ್ರತವನ್ನು ಪರಿಪಾಲನೆ ಮಾಡಿದ ಮೇಲೆ ಗಂಡುಮಕ್ಕಳಿಗೆ ಮದುವೆ ಮಾಡುವಂತೆ, ಹೆಣ್ಣುಮಕ್ಕಳು ಕೂಡ ಬ್ರಹ್ಮಚರ್ಯ

ವನ್ನು ಪರಿಪಾಲನೆ ಮಾಡಬೇಕು. ಮತ್ತು ತಂದೆತಾಯಿಗಳು ಅವರಿಗೆ ವಿದ್ಯಾಭ್ಯಾಸ ನೀಡಬೇಕು. ಆದರೆ ನಾವು ನಿಜ ವಾಗಿಯೂ ಮಾಡುತ್ತಿರುವುದು ಏನು? ನಿಮ್ಮ ಹೆಂಗಸರ ಸ್ಥಿತಿಯನ್ನು ಉತ್ತಮಗೊಳಿಸಬಲ್ಲಿರಾ? ಅನಂತರ ನಿಮ್ಮ ಅಭಿವೃದ್ಧಿಗೆ ದಾರಿ ಇದೆ. ಹಾಗಿಲ್ಲದೆ ಇದ್ದರೆ ಈಗ ಇರುವಂತೆ ಎಂದೆಂದಿಗೂ ಹೀನಸ್ಥಿತಿಯಲ್ಲಿ ಉಳಿಯಬೇಕಾಗುವುದು. ಹಿಂದೂ ನಾರಿಯರು ಧಾರ್ಮಿಕ ಮತ್ತು ಆಧ್ಯಾತ್ಮಿಕ ಪ್ರವೃತ್ತಿ ಯವರು. ಬಹುಶಃ ಪ್ರಪಂಚದ ಇತರ ನಾರಿಯರಿಗಿಂತ ಹೆಚ್ಚು ಎಂದು ಬೇಕಾದರೆ ಹೇಳಬಹುದು. ನಾವು ಈ ಪವಿತ್ರ ಭಾವನೆಯನ್ನು ರಕ್ಷಿಸಿಕೊಂಡು ನಮ್ಮ ಸ್ತ್ರೀಯರ ಬುದ್ಧಿಯ ಬೆಳವಣಿಗೆಗೆ ಅವಕಾಶ ಕೊಟ್ಟರೆ ಭಾರತದ ನಾರಿಯು ಸಮಸ್ತ ವಿಶ್ವಕ್ಕೇ ಆದರ್ಶವಾಗುವಳು.

ತ್ಯಾಗ ಮತ್ತು ಸೇವೆಯೇ ಭಾರತದ ಆದರ್ಶವೆಂದು ಸಾರಿದ ಅವರು ಈ ಆದರ್ಶಗಳಿಂದ ಮಾತ್ರ ನಮ್ಮ ದೇಶದ ಉದ್ಧಾರ ಎಂದು ಮನಗಂಡಿದ್ದರು. ಅವರು ಸಾರಿದ 'ನಿನ್ನ ಏಳ್ಗೆಗೆ ನೀನೆ ಶಿಲ್ಪಿ' ಎಂಬ ಮಾತು ಸಾರ್ವಕಾಲಿಕವಾದುದು. ಪುರುಷರೇ ಆಗಿರಲಿ ಸ್ತ್ರೀಯರೇ ಆಗಿರಲಿ ತಮ್ಮ ಉದ್ಧಾರವನ್ನು ತಾವೇ ಮಾಡಿಕೊಳ್ಳಬೇಕೆಂಬುದು ಅವರ ಅಭಿಮತ. ಭಗವ ದ್ಗೀತೆಯಲ್ಲಿ ಶ್ರೀಕೃಷ್ಣ ಪರಮಾತ್ಮನು ಹೀಗೆ ಹೇಳುತ್ತಾನೆ: **ಉದ್ಧರೇದಾತ್ಮನಾತ್ಮಾನಂ ನಾತ್ಮಾನಮವಸಾದಯೇತ್।** 'ತನ್ನ ಮನಸ್ಸಿನಿಂದ ತನ್ನನ್ನು ತಾನೇ ಉದ್ಧಾರ ಮಾಡಿಕೊಳ್ಳಬೇಕು; ಆದರೆ ಕುಗ್ಗಿಸಿಕೊಳ್ಳಬಾರದು.' *(ಗೀತಾ, ೬.೫)*

ಯಾವುದೇ ರಾಷ್ಟ್ರದ ಮಾನವ ಜನಾಂಗವು ಸ್ವಾತಂತ್ರ್ಯವೆಂದರೆ, ತಮ್ಮ ತಮ್ಮ ಸ್ವ-ಇಚ್ಛೆಗನುಸಾರವಾಗಿ ನಡೆಯುವುದು ಎಂದೇ ಅರ್ಥೈಸಿಕೊಂಡಿರುವುದು. ಆದರೆ ಸ್ವಾಮಿ ವಿವೇಕಾನಂದರ ಪ್ರಕಾರ ಸ್ವಾತಂತ್ರ್ಯವೆಂದರೆ ಜವಾಬ್ದಾರಿಯುತ ನಡವಳಿಕೆ. ಸ್ವಾಮಿ ವಿವೇಕಾನಂದರಿಗೆ ಸಮಾಜ ಸುಧಾರಕರು ವಿಧವೆಯರ ಪ್ರಶ್ನೆಯನ್ನು ಹೇಗೆ ಬಗೆ ಹರಿಸುವಿರಿ ಎಂದು ಕೇಳಿದಾಗ ಅವರು ಹೀಗೆ ಉತ್ತರಿಸುತ್ತಾರೆ:

"ಅನೇಕ ವೇಳೆ ನನ್ನನ್ನು ಜನರು ವಿಧವೆಯರ ಪ್ರಶ್ನೆಯನ್ನು ಹೇಗೆ ಬಗೆಹರಿಸುವಿರಿ? ಎಂದು ಮುಂತಾಗಿ ಕೇಳು ವರು. ನಾನು ಅವರಿಗೆ ಮರಳಿ ಪ್ರಶ್ನಿಸಿದೆ, ಏನು ನಾನು ವಿಧವೆಯೇ? ಪುನಃ ಪುನಃ ಈ ಪ್ರಶ್ನೆಯನ್ನು ಕೇಳುತ್ತೀರಲ್ಲಾ? ನಾನು ಸ್ತ್ರೀಯೆ? ಸ್ತ್ರೀಯರ ಸಮಸ್ಯೆಯನ್ನು ಬಗೆಹರಿಸಲು ನೀವಾರು? ನೀವೇನು ಭಗವಂತನೆ, ಪ್ರತಿಯೊಬ್ಬ ಸ್ತ್ರೀಯನ್ನು ಮಹಿಳೆಯನ್ನು ಆಳುವುದಕ್ಕೆ? ಸುಮ್ಮನಿದ್ದುಬಿಡಿ! ಅವರು ತಮ್ಮ ಸಮಸ್ಯೆಯನ್ನು ತಾವೇ ಬಗೆಹರಿಸಿಕೊಳ್ಳುವರು. ಇತರರನ್ನು ಉದ್ಧಾರ ಮಾಡುತ್ತೇವೆ ಎಂದು ತಿಳಿದ ನೀವು ಕ್ರೂರಿಗಳು! ಸುಮ್ಮನಿದ್ದುಬಿಡಿ! ಅವರನ್ನೆಲ್ಲ ಭಗವಂತ ನೋಡಿ ಕೊಳ್ಳುವನು."

ಸ್ತ್ರೀಯರು ತಮ್ಮ ರೀತಿಯಲ್ಲಿಯೇ ತಮ್ಮ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಬಲ್ಲ ಸ್ಥಿತಿಯಲ್ಲಿ ನಾವು ಅವರನ್ನು ಇಡಬೇಕು. ಇತರರು ಯಾರೂ ಅವರಿಗೆ ಇದನ್ನು ಮಾಡಲಾರರು, ಮಾಡಕೂಡದು. ಭಾರತೀಯ ಸ್ತ್ರೀಯರು ಜಗತ್ತಿನ ಇತರ ಮಹಿಳೆಯರಷ್ಟೇ ಇದನ್ನು ಸಾಧಿಸಲು ಸಮರ್ಥರು. 'ಮೊದಲು ನಿಮ್ಮ ಸ್ತ್ರೀಯರನ್ನು ವಿದ್ಯಾವಂತರನ್ನಾಗಿ ಮಾಡಿ. ಅವರಿಗೆ ಸ್ವಾತಂತ್ರ್ಯವನ್ನು ಕೊಡಿ. ಅನಂತರ ಯಾವ ಸುಧಾರಣೆ ತಮಗೆ ಆವಶ್ಯಕ ಎಂಬುದನ್ನು ಅವರೇ ಹೇಳುವರು. ನಂತರ ಅವರು ತಮಗೆ ಸೂಕ್ತವೆಂದು ಕಂಡಂತೆ ಮಾಡಲಿ.'

ಸ್ವಾಮೀಜಿಯವರು ತಮ್ಮ 'ಭಾರತದ ಮಹಾಪುರುಷರು' ಎಂಬ ಉಪನ್ಯಾಸದಲ್ಲಿ ಸೀತಾಮಾತೆಯೇ ಭಾವೀ ಭಾರತದ ಮಹಿಳೆಯ ಆದರ್ಶವೆಂದು ಸಾರಿ ಹೇಳಿದ್ದಾರೆ :

"ಪ್ರಪಂಚದ ಹಿಂದಿನ ಮತ್ತು ಮುಂದೆ ಬರುವ ಸಮಗ್ರ ಸಾಹಿತ್ಯವನ್ನು ತಿರುವಿ ಹಾಕಿದರೂ ನೀವು ಇನ್ನೊಬ್ಬ ಸೀತೆಯನ್ನು ಕಾಣಲಾರಿರಿ. ಸೀತೆಯದು ಒಂದು ವೈಶಿಷ್ಟ್ಯ. ಆ ಪಾತ್ರ ಒಮ್ಮೆ ಮಾತ್ರ ನಿರೂಪಿಸಲ್ಪಟ್ಟಿತು. ರಾಮನಂಥವರನ್ನು ನಾವು ಅನೇಕರನ್ನು ಕಾಣಬಹುದು. ಆದರೆ ಸೀತೆ ಮಾತ್ರ ಒಬ್ಬಳೇ. ನಿಜವಾದ ಭಾರತೀಯ ಸ್ತ್ರೀಯ ಅಪ್ಪಟ ಮಾದರಿ ಅವಳು. ಭಾರತೀಯ ಮಹಿಳೆಯ ಪರಿಪೂರ್ಣ ಆದರ್ಶ ಗಳೆಲ್ಲ ಸೀತೆಯ ಜೀವನದಿಂದಲೇ ರೂಪುಗೊಂಡಿವೆ. ಸಹಸ್ರಾರು ವರ್ಷಗಳಿಂದಲೂ ಆರ್ಯರ ಚರಿತ್ರಾದ್ಯಂತ ಪ್ರತಿಯೊಬ್ಬ ಪುರುಷ ಸ್ತ್ರೀ ಮತ್ತು ಮಕ್ಕಳು ಎಲ್ಲರೂ ಅವಳನ್ನು ಪೂಜಿಸುತ್ತಾರೆ... ಸೀತೆಯು ನಮ್ಮ ಜನಾಂಗದ ಜೀವಾಳವೇ ಆಗಿದ್ದಾಳೆ. ಪ್ರತಿಯೊಬ್ಬ ಹಿಂದೂ ಪುರುಷ ಮಹಿಳೆಯ ರಕ್ತದಲ್ಲಿ ಸೀತೆ ಇದ್ದಾಳೆ. ನಾವೆಲ್ಲ ಸೀತೆಯ ಮಕ್ಕಳು, ಸೀತೆಯ ಆದರ್ಶದಿಂದ ದೂರವಾದ ವಿಧಾನದಲ್ಲಿ ನಮ್ಮ ಮಹಿಳೆಯನ್ನು ಸುಧಾರಿಸುವ ಯಾವುದೇ ಪ್ರಯತ್ನವು ತಕ್ಷಣ ವಿಫಲಗೊಳ್ಳುತ್ತದೆ. ಇದು ನಮ್ಮ ನಿತ್ಯದ ಅನುಭವ. ಭಾರತೀಯ ಮಹಿಳೆಯು ಸೀತೆಯ ಹೆಜ್ಜೆಯಲ್ಲಿಯೇ ಮುಂದುವರಿಯಬೇಕು, ಇದೊಂದೇ ಮಾರ್ಗ."

ಮತ್ತೆ ಸ್ವಾಮೀಜಿ ಸಾವಿತ್ರಿಯ ಬಗ್ಗೆ ಹೇಳುತ್ತ, "ಭರತಖಂಡದಲ್ಲಿ ಪ್ರತಿಯೊಬ್ಬ ಹುಡುಗಿಯೂ ಸಾವಿತ್ರಿ ಯಂತಾಗಬೇಕು. ಮೃತ್ಯು ಅವಳ ಪ್ರೇಮವನ್ನು ಜಯಿಸ ಲಾರದೆ ಹೋಯಿತು. ಅವಳು ಪ್ರೇಮದ ಅದ್ಭುತ ಶಕ್ತಿಯಿಂದ ಯಮನ ಕೈಗಳಿಂದಲೂ ತನ್ನ ಪತಿಯ ಪ್ರಾಣವನ್ನು ಕಸಿದು ಕೊಂಡು ಬಂದಳು" ಎಂದು ಹೇಳಿದರು.

ಭಾರತೀಯ ನಾರಿಯು ಭಾರತೀಯ ಉಡುಪಿನಲ್ಲಿ ವೇದಗಳ ಕಾಲದ ಮಂತ್ರದ್ರಷ್ಟಾರರಾದ ಋಷಿಗಳ ಬಾಯಿಂದ ಹೊರಹೊಮ್ಮಿದ ಅಧ್ಯಾತ್ಮ ಧರ್ಮವನ್ನು ಬೋಧಿಸಿದರೆ ನನ್ನ ಕಣ್ಣಿಗೆ ಭಾರತದ ಭವಿಷ್ಯ ಕಾಣುವುದು, ಪಾಶ್ಚಾತ್ಯ ದೇಶಗಳೆಲ್ಲವನ್ನೂ ಮುಳುಗಿಸುವ ಒಂದು ಮಹಾತರಂಗವೇ ಏಳುವುದು ಎಂಬುದು ಅವರ ಕಳಕಳಿಯಾಗಿತ್ತು. ಇದನ್ನು ಸಾಧಿಸುವುದಕ್ಕೆ ಭಾರತೀಯ ನಾರಿಯರಿಗೆ ಅವರ ಉನಿಷತ್ತುಗಳ ಕಾಲದ ನಾರಿಯರಾದ ಮೈತ್ರೇಯಿ, ಖನಾ, ಲೀಲಾವತಿ, ಸಾವಿತ್ರಿ ಮತ್ತು ಉಭಯಭಾರತಿಯರ ಹಿರಿಮೆಯನ್ನು ತೋರಿಸಿಕೊಡುತ್ತಿದ್ದರು. ಶ್ರೀಮತಿ ಸರಳ ಘೋಷಾಲ್ ಅವರ ಪ್ರತಿಭೆ ಮತ್ತು ಆಧ್ಯಾತ್ಮಿಕ ನಿಲುವನ್ನು ತಿಳಿದ ಸ್ವಾಮೀಜಿಯವರು, ಅವರು ಪಾಶ್ಚಾತ್ಯ ರಾಷ್ಟ್ರಗಳಿಗೆ ಸಂಚರಿಸಿ ನಮ್ಮ ಸನಾತನ ಧರ್ಮವನ್ನು ಬೋಧಿಸಬೇಕೆಂದು ತಿಳಿಸಿದರು.

ಶಿಷ್ಯನೊಂದಿಗೆ ಮಾತನಾಡುತ್ತ ಸ್ವಾಮೀಜಿಯವರು, "ಈ ಯುಗದ ಆವಶ್ಯಕತೆಯನ್ನು ಸರಿಯಾಗಿ ವೀಕ್ಷಿಸಿದರೆ ಕೆಲವರನ್ನು ಈ ತ್ಯಾಗದ ಧ್ಯೇಯದಲ್ಲಿ ತರಬೇತುಗೊಳಿಸುವುದು ಅನಿವಾರ್ಯವಾಗಿದೆ. ಅವರು ಆಜೀವ ಬ್ರಹ್ಮಚಾರಿಣಿಯರಾಗಿಯೇ ಉಳಿಯುವ ವ್ರತದಲ್ಲಿ ತೊಡಗುವರು. ಪ್ರಾಚೀನ ಸಂಪ್ರದಾಯದಿಂದ ಅವರು ತಮ್ಮಲ್ಲಿ ಅಂತರ್ಗತವಾಗಿರುವ ಸತೀತ್ವದ ಶಕ್ತಿಯಿಂದ ಪ್ರಜ್ವಲಿಸುತ್ತಿರುವರು. ಅದರ ಜೊತೆಗೆ ಅವರಿಗೆ ವಿಜ್ಞಾನ ಮತ್ತಿತರ ವಿಷಯಗಳನ್ನು ತಿಳಿಸಿಕೊಡಬೇಕು. ಇದರಿಂದ ಅವರಿಗೆ ಉಪಯೋಗವಾಗುವುದಲ್ಲದೆ ಇತರರಿಗೂ ಉಪಯೋಗವಾಗುವುದು. ಇದನ್ನು ತಿಳಿಯುವುದರಿಂದ ಅವರು ಅವುಗಳನ್ನು ಕಲಿಯುವರು, ಮತ್ತು ಅದನ್ನು ಅನುಸರಿಸುವುದರಲ್ಲಿ ಆನಂದಿಸುವರು. ಇಂತಹ ಪವಿತ್ರಾತ್ಮರಾದ ಹಲವು ಬ್ರಹ್ಮಚಾರಿಗಳು, ಬ್ರಹ್ಮಚಾರಿಣಿಯರು ನಮ್ಮ ತಾಯ್ನಾಡಿನ ಕಲ್ಯಾಣಕ್ಕೆ ಈಗ ಅತ್ಯಾವಶ್ಯಕ."

ಆಧುನಿಕ ಭಾರತಿಯ ಮಹಿಳೆಯ ಬಗ್ಗೆ ಸ್ವಾಮಿ ವಿವೇಕಾನಂದರ ದೃಷ್ಟಿಕೋನವನ್ನು ಭಗಿನಿ ನಿವೇದಿತಾ ಹೀಗೆ ಬರೆದಿದ್ದಾರೆ:

"ಆಧುನಿಕ ವಿಜ್ಞಾನಗಳನ್ನು ಸ್ತ್ರೀ ಕಲಿಯಲೇಬೇಕು; ಆದರೆ ಹಿಂದಿನ ಆಧ್ಯಾತ್ಮಿಕ ಸ್ವಭಾವವನ್ನು ಅದಕ್ಕಾಗಿ ಬಲಿ ಕೊಡಬಾರದು. ಸಮಗ್ರ ಸಮಾಜದಲ್ಲಿ ನೇರ ಬದಲಾವಣೆಯ ಪ್ರಭಾವವನ್ನು ಅತಿ ಕಡಿಮೆ ಪ್ರಮಾಣದಲ್ಲಿ ಬೀರುವುದೇ ಆದರ್ಶ ಶಿಕ್ಷಣವೆಂದು ಅವರು ಕಂಡುಕೊಂಡಿದ್ದರು. ಭಾರತದ ಪ್ರಾಚೀನ ಮಹಿಳೆಯರ ಹಿರಿಮೆಯನ್ನು ಪ್ರತಿಯೊಬ್ಬ ಭಾವೀ ಮಹಿಳೆಯೂ ಅಳವಡಿಸಿಕೊಳ್ಳುವಂತೆ ಮಾಡುವುದೇ ನಿಜವಾದ ಸ್ತ್ರೀ-ಶಿಕ್ಷಣವೆಂದು ಅವರು ಹೇಳುತ್ತಿದ್ದರು.

"ಭವಿಷ್ಯದ ಭಾರತೀಯ ನಾರಿಯರಲ್ಲಿ ತಾಯಿಯ ಮೃದು ಹೃದಯ ಇರಬೇಕು; ಆದರೆ ಅಲ್ಲಿ ಕೆಚ್ಚೆದೆಯ ಇಚ್ಛಾ ಶಕ್ತಿಯೂ ಮಿಲನವಾಗಿರಬೇಕು. ಹಿಂದೆ ವೈದಿಕ ಹೋಮದಿಂದೆದ್ದ ಸ್ವತಂತ್ರ ಪ್ರಶಾಂತಮೂರ್ತಿ ಸಾವಿತ್ರಿಯ ಹಿನ್ನೆಲೆಯೂ ಇರಬೇಕು. ಮತ್ತು ಇವರಲ್ಲಿ ಮಲಯಮಾರುತದಂತೆ ಮಾಧುರ್ಯ ಮತ್ತು ನಯವಿನಯವೂ ನೆಲಸಿರಬೇಕು. ಸ್ತ್ರೀಯರು ಮತ್ತು ನಿಮ್ನ ವರ್ಗದವರಿಗೆ ವಿದ್ಯೆ ದೊರಕಿದರೆ ಸಾಕು. ಅನಂತರ ಅವರ ಸಮಸ್ಯೆಯನ್ನು ಅವರೇ ಪರಿಹರಿಸಿಕೊಳ್ಳುವರು." ಇದೇ ಸ್ವಾಮೀಜಿಯ ದೃಷ್ಟಿ.

ಸನಾತನ ಆದರ್ಶಗಳ ಅಡಿಪಾಯದ ಮೇಲೆ ಸುಶಿಕ್ಷಿತವಾದ ಶಿಕ್ಷಣವನ್ನು ಪಡೆದ ಮಹಿಳೆಯು ತನ್ನ ಸ್ಥಾನಮಾನಗಳ ಮಹತ್ವವನ್ನು ಅರಿತುಕೊಂಡು ಸಮಾಜದ ಶಾಂತಿ ಮತ್ತು ಸಮೃದ್ಧಿಗಳಿಗಾಗಿ ತನ್ನ ವೈಶಿಷ್ಟ್ಯಪೂರ್ಣ ಸೇವೆಯನ್ನು ಸಲ್ಲಿಸುವಂತಾಗಬೇಕು. ಸ್ತ್ರೀಪುರುಷರೇ ಆಗಿರಲಿ ಅವರು ತಮ್ಮದೇ ಆದ ಮಾದರಿಯಲ್ಲಿ ಬೆಳೆದರೆ ಮಾತ್ರ ತನ್ನ ದೇಹಪ್ರಜ್ಞೆಯನ್ನು ಮರೆತು ಆತ್ಮಜ್ಞಾನವನ್ನು ಸಾಧಿಸಬಹುದೆಂಬುದನ್ನು ಭಾರತೀಯ ವಿಚಾರಸರಣಿ ತಿಳಿಸಿಕೊಡುತ್ತದೆ. ಈ ಆತ್ಮಜ್ಞಾನವೇ ಸ್ತ್ರೀ ಮತ್ತು ಪುರುಷನ ನಿಜವಾದ ಸ್ವರೂಪ. ರಾಮಕೃಷ್ಣ ಮಠದ ೧೩ನೆಯ ಅಧ್ಯಕ್ಷರಾದ ಸ್ವಾಮಿ ರಂಗನಾಥಾನಂದಜಿಯವರು ಮಹಿಳೆಯರ ಏಳ್ಗೆಗೆ ಕೆಲವು ಸೂಚನೆಗಳನ್ನು ನೀಡುತ್ತಾ ಹೇಳುತ್ತಾರೆ:

"ನಮ್ಮ ಮಹಿಳೆಯರು ಉಪವಾಸ, ವ್ರತಗಳನ್ನು ಆಚರಿಸುವುದು ಒಳ್ಳೆಯದು. ಮನಸ್ಸು ಮತ್ತು ಭಾವನೆಗಳನ್ನು ಸಂಯಮಗೊಳಿಸಿ ಅವುಗಳ ಶಕ್ತಿಯನ್ನು ಸಾಮಾಜಿಕ ಹಿತದ ಕಾರ್ಯಗಳಿಗೆ ಸಂಯೋಜಿಸುವುದು ಚಾರಿತ್ರ್ಯ ಮತ್ತು ದಕ್ಷತೆಗಳ ಬೆಳವಣಿಗೆಯಲ್ಲಿ ಬಹಳ ಮಹತ್ವದ ಅಂಶ. ನಮ್ಮ ಮಹಿಳೆಯರ ಸಂಯಮರಹಿತ ಮಾತುಗಳೇ ನಮ್ಮ ಮನೆ ಮತ್ತು ಸಮಾಜಗಳಲ್ಲಿಯ ಅಸಂತೋಷಕ್ಕೆ ಕಾರಣವಾಗಿರುತ್ತದೆ. ಭಾರತೀಯ ಪರಂಪರೆಯನ್ವಯ ವಾಗ್ದೇವತೆಯೇ ವಿದ್ಯಾಧಿದೇವತೆ. ಮಾತಿನ ಸಂಯಮ ಮತ್ತು ಶುದ್ಧಿಯಿಂದ ನಾವು ಜ್ಞಾನವನ್ನು ಗಳಿಸಬಲ್ಲೆವು ಮತ್ತು ಶಾಂತಿ ಹಾಗೂ ಸಮಾಧಾನಗಳನ್ನು ಪಸರಿಸಬಲ್ಲೆವು. ಶ್ರೀಶಂಕರಾಚಾರ್ಯರು 'ವಿವೇಕ ಚೂಡಾಮಣಿ' ಯಲ್ಲಿ **'ಯೋಗಸ್ಯ ಪ್ರಥಮಂ ದ್ವಾರಂ ವಾಙ್ನಿರೋಧಃ'** (*ಶ್ಲೋಕ, ೩೬೭*) – ಯೋಗದ ಮೊದಲ ಮಹಾದ್ವಾರವೇ ಮಾತಿನ ಸಂಯಮ ಎಂದು ಹೇಳಿದ್ದಾರೆ."

ಸ್ವಾಮಿ ವಿವೇಕಾನಂದರು ಸ್ತ್ರೀಯರ ಉದ್ಧಾರವಾದರೆ ಮಾತ್ರ ಭಾರತದ ಉದ್ಧಾರವೆಂದು ತಮ್ಮ ಸೋದರ ಸಂನ್ಯಾಸಿಗಳಿಗೆ ಬರೆದ ಪತ್ರದಲ್ಲಿ ತಿಳಿಸಿರುವುದು ಕಂಡುಬರುತ್ತದೆ:

"ಶ್ರೀಶಾರದಾದೇವಿಯವರ ಅದ್ಭುತ ಜೀವನದ ಮಹತ್ವವನ್ನು ನಿಮ್ಮಲ್ಲಿ ಇನ್ನೂ ಯಾರೂ ಅರಿತುಕೊಂಡಿಲ್ಲ. ಆದರೆ ಕಾಲಕ್ರಮದಲ್ಲಿ ನೀವು ಅದನ್ನು ಅರಿಯುವಿರಿ. ಆದ್ಯಾಶಕ್ತಿಯ ಅನುಗ್ರಹವಿಲ್ಲದೆ ಜಗತ್ತಿಗೆ ಉದ್ಧಾರವಿಲ್ಲ. ಇತರ ಎಲ್ಲ ರಾಷ್ಟ್ರಗಳಿಗಿಂತ ನಮ್ಮ ರಾಷ್ಟ್ರ ದುರ್ಬಲಗೊಂಡಿದೆಯಲ್ಲ ಏಕೆ?... ಏಕೆಂದರೆ ಇಲ್ಲಿ ಆದ್ಯಾಶಕ್ತಿಯನ್ನು ಅವಮಾನಿಸಲಾಗಿದೆ. ಈ ಅದ್ಭುತ ಶಕ್ತಿಯನ್ನು ಜಾಗ್ರತಗೊಳಿಸುವುದಕ್ಕಾಗಿಯೇ ಶ್ರೀಮಾತೆ ಶಾರದಾದೇವಿಯವರು ಅವತರಿಸಿ ಬಂದಿದ್ದಾರೆ. ಅವರನ್ನು ಕೇಂದ್ರವಾಗಿಸಿಕೊಂಡು ಈ ಜಗತ್ತಿನಲ್ಲಿ ಇನ್ನೊಮ್ಮೆ ಗಾರ್ಗಿಯರು, ಮೈತ್ರೇಯಿಯರು ಉದಿಸಿಬರಲಿದ್ದಾರೆ... ಅಮೆರಿಕಾ, ಯುರೋಪುಗಳಲ್ಲಿ ನೀನೇನು ಕಾಣುತ್ತಿ? ಶಕ್ತಿ ಪೂಜೆಯನ್ನು! ಆದರೆ ಅವರು ಆ ಶಕ್ತಿಯನ್ನು ಇಂದ್ರಿಯ ಭೋಗಗಳ ಮೂಲಕ ಆರಾಧಿಸುತ್ತಿದ್ದಾರೆ. ಹೀಗಿರುವಾಗ, ಯಾರು ಅದೇ ಶಕ್ತಿಯನ್ನು ತಮ್ಮ ಜನನಿ ಎಂದು ಭಾವಿಸಿ ಸಾತ್ವಿಕ ಭಾವದಿಂದ, ಪರಿಶುದ್ಧ ಹೃದಯದಿಂದ ಆರಾಧಿಸುವರೋ ಅವರು ಇನ್ನೆಷ್ಟು ಸನ್ಮಂಗಳವನ್ನು ಸಾಧಿಸಿಕೊಳ್ಳಲಿಕ್ಕಿಲ್ಲ?... ನಾವು ಮೊಟ್ಟಮೊದಲು ಶ್ರೀಶಾರದಾದೇವಿಯವರ ಹೆಸರಿನಲ್ಲಿ ಒಂದು ಮಠವನ್ನು ಕಟ್ಟಬೇಕು. ಮೊದಲು ಶ್ರೀಶಾರದಾದೇವಿಯವರು ಹಾಗೂ ಅವರ ಸ್ತ್ರೀಸಂತಾನ... ಶ್ರೀಮಾತೆಯವರ ಕೃಪೆ, ಶ್ರೀಮಾತೆಯವರ ಆಶೀರ್ವಾದ ಎಲ್ಲವೂ ನನಗೆ ಪರಮೋತ್ಕೃಷ್ಟ."

ಹಾಗೆಯೇ ತಮ್ಮ ಮತ್ತೊಬ್ಬ ಸೋದರ ಸಂನ್ಯಾಸಿಗೆ ಮುಂದಿನ ಕಾರ್ಯಪ್ರಣಾಳಿಕೆಗಳನ್ನು ತಿಳಿಸುತ್ತಾ ಅವರು ಹೇಳುತ್ತಾರೆ: "ಮಹಿಳೆಯರ ಸ್ಥಿತಿ ಉತ್ತಮಗೊಂಡಲ್ಲದೆ ಜಗತ್ತು